## ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ-7 ನಿಯಮ 11(ಡಿ) ರಡಿಯಲ್ಲಿ ಸಲಿಸಿರುವ ಮಧ್ಯಕಾಲೀನ ಅರ್ಜಿ ಸಂಖ್ಯೆ 2ರ ಮೇಲೆ ಆದೇಶ

1. 1 ಮತ್ತು 2ನೇ ಪ್ರತಿವಾದಿಯರು ಪ್ರಸ್ತುತ ಅರ್ಜಿಯನ್ನು ಸಲ್ಲಿಸಿ ವಾದಿಯರು ಸಲ್ಲಿಸಿರುವ ವಾದ ಪತ್ರವನ್ನು ತಿರಸ್ಕರಿಸುವಂತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಪ್ರತಿವಾದಿಯರು ತಮ್ಮ ಅರ್ಜಿಗೆ ಪೂರಕವಾಗಿ ಅಂಶಗಳನ್ನು ಪ್ರಮಾಣ ಪೂರಕವಾಗಿ ಸದರಿ ಪ್ರಮಾಣಪತ್ರದಲ್ಲಿ

ತಿಳಿಸಿರುತ್ತಾರೆ. ಪ್ರತಿವಾದಿಯರು ತಮ್ಮ ಪ್ರಮಾಣಪತ್ರದಲ್ಲಿ ವಾದಿಯರು ತಮ್ಮ ವಾದಪತ್ರದಲ್ಲಿ ಜೀವ ವಿಮಾ ಪಾಲಿಸಿ ನಂಬರ್ ಮತ್ತು ಸ್ಥಿರ ಠೇವಣಿ (ಎಫ್.ಡಿ.) ಪ್ರಮಾಣಪತ್ರದ ನಂಬರ್‌ನ್ನು ನಮೂದಿಸಿರುತ್ತಾರೆ, ಬದಲಿಗೆ ತಾವು ಕೋರಿರುವ ಪರಿಹಾರದ ಮೊತ್ತವನ್ನು ನಮೂದಿಸಿರುವುದಿಲ್ಲ, ವಾದಿಯರ ಪ್ರಕಾರ ಜೀವ ವಿಮಾ ಪಾಲಿಸಿಯ ಮೊತ್ತ ಮತ್ತು ಸ್ಥಿರ ಠೇವಣಿ (ಎಫ್.ಡಿ.) ಮೊತ್ತವನ್ನು ಕೂಡಿದರೆ 11 ಲಕ್ಷಕ್ಕೂ ಮೇಲ್ಪಟ್ಟ ಪರಿಹಾರದ ಮೌಲ್ಯವಾಗಿರುತ್ತದೆ. ಸದರಿ ಪರಿಹಾರದ ಮೌಲ್ಯವನ್ನು ಈ ನ್ಯಾಯಾಲಯದಲ್ಲಿ ಪಡೆದುಕೊಳ್ಳಲು ಮೌಲೀಕ ನ್ಯಾಯಾಧೀಕಾರ ವ್ಯಾಪ್ತಿ ಇರುವುದಿಲ್ಲ, ಹಾಗೇ ಸಮರ್ಪಕ ನ್ಯಾಯಾಲಯದ ಶುಲ್ಕವನ್ನು ಪಾವತಿ ಮಾಡಲು ತಪ್ಪಿಸಿಕೊಳ್ಳುವ ಸಲುವಾಗಿ ತಪ್ಪಾಗಿ ಮೌಲೀಕರಣ ಮಾಡಿ ವಾದಪತ್ರವನ್ನು ಸಲ್ಲಿಸಿರುವುದರಿಂದ ವಾದಪತ್ರವನ್ನು ತಿರಸ್ಕರಿಸುವಂತೆ ಕೋರಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಪ್ರತಿವಾದಿಯರು ಸಲ್ಲಿಸಿರುವ ಅರ್ಜಿಗೆ ವಾದಿಯರು ಹಾಜರಾಗಿ ತಮ್ಮ ಪರವಾಗಿ ತಕರಾರನ್ನು ಸಲ್ಲಿಸಿರುತ್ತಾರೆ. ವಾದಿಯರು ತಮ್ಮ ತಕರಾರಿನಲ್ಲಿ ವಾದಿಯರು ಪ್ರಸ್ತುತ ದಾವೆಯನ್ನು ಎಫ್.ಡಿ. ಮೊತ್ತ ಮತ್ತು ಜೀವ ವಿಮಾ ಪಾಲಿಸಿಯ ಹಣದ ವಸೂಲಾತಿಗಾಗಿ ದಾವೆಯನ್ನು ಸಲ್ಲಿಸಿರುವುದಿಲ್ಲ, ಬದಲಿಗೆ ಎಫ್.ಡಿ. ಮೊತ್ತ ಮತ್ತು ಜೀವ ವಿಮಾ ಪಾಲಿಸಿಯ ಹಣವನ್ನು ಪಡೆದುಕೊಳ್ಳಲು ಯಾರು ಅರ್ಹರಾಗಿರುತ್ತಾರೆಂಬುದಾಗಿ ಘೋಷಣೆಯನ್ನು ಕೋರಿ ವಾದಪತ್ರವನ್ನು ಸಲ್ಲಿಸಲಾಗಿರುತ್ತದೆ. ಈ ಸಂಬಂಧ ವಾದಿಯರು ಕರ್ನಾಟಕ ನ್ಯಾಯಾಲಯದ ಶುಲ್ಕ ಮತ್ತು ದಾವಾ ಮೌಲೀಕರಣ ಕಲಂ 24(ಡಿ) ರ ಅಡಿಯಲ್ಲಿ ರೂ.1000-00 ಗಳಿಗೆ ಮೌಲೀಕರಣ ಮಾಡಿ ರೂ.25-00ಗಳ ನ್ಯಾಯಾಲಯದ ಶುಲ್ಕವನ್ನು ಪಾವತಿಸಿರುತ್ತಾರೆ. ಹಾಗೇ ಮುಂದುವರೆದು, ವಾದಿಯರ ವಾದಪತ್ರವನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಿದ ಸಮಯದಲ್ಲಿ ನ್ಯಾಯಾಲಯದ ಶುಲ್ಕಕ್ಕೆ ಸಂಬಂಧಿಸಿದಂತೆ ತಕರಾರು ಬಂದ ಸಂದರ್ಭದಲ್ಲಿ ನ್ಯಾಯಾಲಯವು ಸದರಿ ತಕರಾರನ್ನು ಮನ್ನಿಸಿ ದಾವೆಯನ್ನು ನೊಂದಾಯಿಸಿಕೊಂಡಿದ್ದು, ನ್ಯಾಯಾಲಯದ ಶುಲ್ಕಕ್ಕೆ ಸಂಬಂಧಿಸಿದಂತೆ ಮೊತ್ತಮ್ಮೆ ತೀರ್ಮಾನಿಸಿ ಪ್ರಶ್ನೆ

ಉದ್ಭವಿಸಿರುವುದಿಲ್ಲ, ಆ ಕಾರಣದಿಂದ ಪ್ರತಿವಾದಿಯರು ಸಲ್ಲಿಸಿರುವ ಅರ್ಜಿಯನ್ನು ವಜಾಗೊಳಿಸಬೇಕಾಗಿ ಕೋರಿ ತಕರಾರು ಸಲ್ಲಿಸಿರುತ್ತಾರೆ.

3. ಪ್ರತಿವಾದಿಯರ ಮತ್ತು ವಾದಿಯರ ಪರ ವಾದವನ್ನು ಆಲಿಸಲಾಯಿತು, ದಾಖಲೆಗಳನ್ನು ಪರಿಶೀಲಿಸಲಾಯಿತು.

4. ಈ ಕೆಳಕಂಡ ಅಂಶಗಳು ನನ್ನ ಅವಗಹನೆಗೆ ಉದ್ಭವಿಸಿದೆ.

**1. ಪ್ರತಿವಾದಿಯರು ತಮ್ಮ ಅರ್ಜಿಯಲ್ಲಿ ಕೋರಿರುವಂತೆ ವಾದಿಯರ ವಾದಪತ್ರವನ್ನು ತಿರಸ್ಕರಿಸಲು ಯೋಗ್ಯವಾಗಿರುತ್ತದೆಯೆಂದು ರುಜುವಾತುಪಡಿಸಿರುವರೇ?**

**2. ಯಾವ ಆದೇಶ?**

5. ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಲಾಗಿದೆಃ

ಅಂಶ 1ಃ ನಕಾರಾತ್ಮಕವಾಗಿ.

ಅಂಶ 2ಃ ಈ ಕೆಳಗಿನ ಕಾರಣಗಳ ಮೇಲೆ ಅಂತಿಮ ಆದೇಶ ಮಾಡಲಾಗಿದೆಃ

**ಕಾರಣಗಳು**

7. **ಅಂಶ 1ಃ-** ಅರ್ಜಿದಾರರು/ಪ್ರತಿವಾದಿಯರು ತಮ್ಮ ವಾದದಲ್ಲಿ ವಾದಿಯರು ತಮ್ಮ ವಾದಪತ್ರದಲ್ಲಿ ಜೀವ ವಿಮಾ ಪಾಲಿಸಿ ನಂಬರ್ ಮತ್ತು ಸ್ಥಿರ ಠೇವಣಿ (ಎಫ್.ಡಿ.) ಪ್ರಮಾಣಪತ್ರದ ನಂಬರ್‌ನ್ನು ನಮೂದಿಸಿರುತ್ತಾರೆ, ಬದಲಿಗೆ ತಾವು ಕೋರಿರುವ ಪರಿಹಾರದ ಮೊತ್ತವನ್ನು ನಮೂದಿಸಿರುವುದಿಲ್ಲ, ವಾದಿಯರ ಪ್ರಕಾರ ಜೀವ ವಿಮಾ ಪಾಲಿಸಿಯ ಮೊತ್ತ ಮತ್ತು ಸ್ಥಿರ ಠೇವಣಿ (ಎಫ್.ಡಿ.) ಮೊತ್ತವನ್ನು ಕೂಡಿದರೆ 11 ಲಕ್ಷಕ್ಕೂ ಮೇಲ್ಪಟ್ಟ ಪರಿಹಾರದ ಮೌಲ್ಯವಾಗಿರುತ್ತದೆ. ಸದರಿ ಪರಿಹಾರದ ಮೌಲ್ಯವನ್ನು ಈ ನ್ಯಾಯಾಲಯದಲ್ಲಿ ಪಡೆದುಕೊಳ್ಳಲು ಮೌಲೀಕ ನ್ಯಾಯಾಧೀಕಾರ ವ್ಯಾಪ್ತಿ ಇರುವುದಿಲ್ಲ ಎಂಬುದಾಗಿ ವಾದವನ್ನು ತಳೆದಿದ್ದು, ಪ್ರತಿವಾದಿಯರ ವಾದಕ್ಕೆ ಪ್ರತಿಯಾಗಿ ವಾದಿಯರು ತಮ್ಮ ವಾದದಲ್ಲಿ ವಾದಿಯರು ಪ್ರಸ್ತುತ ದಾವೆಯನ್ನು ಸ್ಥಿರ ಠೇವಣಿ (ಎಫ್.ಡಿ.) ಮೊತ್ತ

ಮತ್ತು ಜೀವ ವಿಮಾ ಪಾಲಿಸಿಯ ಹಣದ ವಸೂಲಾತಿಗಾಗಿ ದಾವೆಯನ್ನು ಸಲ್ಲಿಸಿರುವುದಿಲ್ಲ, ಬದಲಿಗೆ ಎಫ್.ಡಿ. ಮೊತ್ತ ಮತ್ತು ಜೀವ ವಿಮಾ ಪಾಲಿಸಿಯ ಹಣವನ್ನು ಪಡೆದುಕೊಳ್ಳಲು ಯಾರು ಅರ್ಹರಾಗಿರುತ್ತಾರೆಂಬುದಾಗಿ ಘೋಷಣೆಯನ್ನು ಕೋರಿ ವಾದಪತ್ರವನ್ನು ಸಲ್ಲಿಸಲಾಗಿರುತ್ತದೆ. ಈ ಸಂಬಂಧ ವಾದಿಯರು ಕರ್ನಾಟಕ ನ್ಯಾಯಾಲಯದ ಶುಲ್ಕ ಮತ್ತು ದಾವಾ ಮೌಲೀಕರಣ ಕಲಂ 24(ಡಿ) ರ ಅಡಿಯಲ್ಲಿ ರೂ.1000-00 ಗಳಿಗೆ ಮೌಲೀಕರಣ ಮಾಡಿ ರೂ.25-00ಗಳ ನ್ಯಾಯಾಲಯದ ಶುಲ್ಕವನ್ನು ಪಾವತಿಸಿರುತ್ತಾರೆ ಎಂಬುದಾಗಿ ವಾದವನ್ನು ಮಂಡಿಸಿರುತ್ತಾರೆ.

8. ಪ್ರತಿವಾದಿಯರು ಮತ್ತು ವಾದಿಯರ ವಾದ ಪ್ರತಿವಾದವನ್ನು ಪರಿಗಣಿಸಿ, ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಎ) ರಿಂದ (ಡಿ) ವರೆಗಿನ ಕಾನೂನಿನ ಅಂಶವನ್ನು ಪರಿಶೀಲಿಸಿ ನೋಡಲಾಗಿ, ಈ ಕೆಳಕಂಡ ಸಂದರ್ಭಗಳಲ್ಲಿ ವಾದಪತ್ರವನ್ನು ತಿರಸ್ಕರಿಸತಕ್ಕುದುಃ (ಎ) ಅದರಲ್ಲಿ ವ್ಯಾಜ್ಯ ಕಾರಣವನ್ನು ತಿಳಿಸದಿರುವಲ್ಲಿ; (ಬಿ) ಕೇಳಲಾದ ಪರಿಹಾರದ ಮೌಲ್ಯವನ್ನು ಕಡಿಮೆಯಾಗಿ ನಮೂದಿಸಿರುವಲ್ಲಿ ಮತ್ತು ತಾನು ಗೊತುಪಡಿಸಿದ ಕಾಲದೊಳಗೆ ಆ ಮೌಲ್ಯ ನಿಗದಿಯನ್ನು ಸರಿಪಡಿಸಬೇಕೆಂದು ನ್ಯಾಯಾಲಯವು ವಾದಿಯನ್ನು ಅಗತ್ಯಪಡಿಸಿದ್ದು, ಅವನು ಹಾಗೆ ಮಾಡಲು ತಪ್ಪಿದಲ್ಲಿ (ಸಿ) ಕೇಳಲಾದ ಪರಿಹಾರದ ಮೌಲ್ಯವನ್ನು ಸರಿಯಾಗಿ ನಮೂದಿಸಿದ್ದರೂ ಸಾಕಷ್ಟು ಸ್ಟಾಂಪುಗಳಿಲ್ಲದ ಕಾಗದದ ಮೇಲೆ ವಾದಪತ್ರವನ್ನು ಬರೆದಿರುವಲ್ಲಿ ಮತ್ತು ನ್ಯಾಯಾಲಯವು ತಾನು ಗೊತ್ತುಪಡಿಸುವ ಕಾಲದೊಳಗೆ ಅಗತ್ಯವಾದ ಸ್ಟಾಂಪು ಕಾಗದವನ್ನು ವಾದಿಯು ಒದಗಿಸಬೇಕೆಂದು ಅವನನ್ನು ಅಗತ್ಯಪಡಿಸಿದ್ದು, ಅವನು ಹಾಗೆ ಮಾಡಲು ತಪ್ಪಿದಲ್ಲಿ (ಡಿ) ವಾದಪತ್ರದಲ್ಲಿನ ಹೇಳಿಕೆಯಿಂದ ದಾವೆಯು ಯಾವುದೇ ಕಾನೂನಿನ ಮೂಲಕ ಪ್ರತಿಬಂಧಿತವಾಗಿದೆಯೆಂದು ಕಂಡುಬಂದಲ್ಲಿ; ಸದರಿ ನಿಯಮಗಳನ್ನು ಪರಿಗಣಿಸಿದರೆ, ವಾದಿಯರ ದಾವೆಯನ್ನು ವಿಚಾರಣೆ ಮಾಡಲು ನ್ಯಾಯಾಲಯಕ್ಕೆ ಮೌಲೀಕ ನ್ಯಾಯಾಧಿಕಾರ ವ್ಯಾಪ್ತಿ ಇಲ್ಲದೇ ಇರುವ ಸಂದರ್ಭದಲ್ಲಿ ವಾದಪತ್ರವನ್ನು ತಿರಸ್ಕರಿಸಲು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 11(ಎ ರಿಂದ ಎಫ್) ವರೆಗೆ ತಿಳಿಸಿರುವುದಿಲ್ಲ, ಬದಲಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 7 ನಿಯಮ 10 ರ ಪ್ರಕಾರ ದಾವೆಯನ್ನು

ನಡೆಸಲು ನ್ಯಾಯಾಧೀಕಾರ ವ್ಯಾಪ್ತಿ ಇಲ್ಲದೇ ಇರುವ ಸಂದರ್ಭದಲ್ಲಿ ವಾದಪತ್ರವನ್ನು ಹಿಂದಿರುಗಿಸಲು ಅವಕಾಶ ಇರುತ್ತದೆ.

9. ಪ್ರತಿವಾದಿಯರು ಪ್ರಸ್ತುತ ಅರ್ಜಿಯನ್ನು ತಪ್ಪಾದ ನಿಯಮದಡಿಯಲ್ಲಿ ಸಲ್ಲಿಸಿದ್ದರು ಸಹ ಅದನ್ನು ತಪ್ಪಾಗಿ ಸಲ್ಲಿಸಿದ ಕಾರಣದ ಮೇರೆಗೆ ಅರ್ಜಿಯನ್ನು ವಜಾಗೊಳಿಸಲು ಬರುವುದಿಲ್ಲ, ಆದ್ದರಿಂದ ಅರ್ಜಿಯಲ್ಲಿ ತಿಳಿಸಿರುವ ಅಂಶವನ್ನು ಪರಿಗಣಿಸಿ, ಪ್ರತಿವಾದಿಯರು ತಿಳಿಸಿರುವ ಕಾರಣದ ಆಧಾರದ ಮೇರೆಗೆ ವಾದಪತ್ರವನ್ನು ಮೌಲೀಕ ನ್ಯಾಯಾಧೀಕಾರ ವ್ಯಾಪ್ತಿ ಆಧಾರದ ಮೇರೆಗೆ ತಿರಸ್ಕರಿಸಲು ಯೋಗ್ಯವಾಗಿದೆಯೇ ಎಂಬುದಾಗಿ ವಾದಪತ್ರದ ಅಂಶಗಳನ್ನು ಪರಿಶೀಲಿಸಿ ನೋಡಲಾಗಿ, ವಾದಿಯರು ತಮ್ಮ ವಾದಪತ್ರದಲ್ಲಿ ವಾದಿಯರು ಮತ್ತು 5ನೇ ಪ್ರತಿವಾದಿ ಮೃತ ಈರಮ್ಮರವರ ವಾರಸುದಾರರಾಗಿರುವುದಾಗಿ ತಿಳಿಸಿರುತ್ತಾರೆ. ಹಾಗೇ ಮೃತ ಈರಮ್ಮ ತನ್ನ ಹೆಸರಿನಲ್ಲಿ ಪಾಲಿಸಿ ನಂ.665650221, 665650222, 665650223, 665650224, 665650233 ಜೀವ ವಿಮಾ ಪಾಲಿಸಿಗಳನ್ನು ಮತ್ತು ಎರಡು ಸ್ಥಿರ ಠೇವಣಿಗಳನ್ನು ಮಾಡಿಸಿದ್ದು, ಸದರಿ ಠೇವಣಿಗಳ ಮೊತ್ತಕ್ಕೆ ವಾದಿಯರು ಅರ್ಹರಾಗಿರುವುದಾಗಿ ತಿಳಿಸಿರುತ್ತಾರೆ. ಸದರಿ ಅಂಶಕ್ಕೆ ಪೂರಕವಾಗಿ ವಾದಿಯರ ಪರ ದಾಖಲೆಗಳನ್ನು ಪರಿಶೀಲಿಸಲಾಗಿ ವಾದಿಯರು ತಮ್ಮ ಪರವಾಗಿ 5 ಪಾಲಿಸಿ ದಾಖಲೆಗಳು ಮತ್ತು ಎರಡು ಎಫ್.ಡಿ. ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಸದರಿ 5 ಪಾಲಿಸಿಗಳ ಒಟ್ಟು ಮೊತ್ತ 3,00,000-00 ರೂಪಾಯಿಗಳಾಗಿರುತ್ತವೆ, ಹಾಗೆ ಎರಡು ಸ್ಥಿರ ಠೇವಣಿಗಳ ಒಟ್ಟು ಮೊತ್ತ 9,00,000-00 ರೂಪಾಯಿಗಳಾರುತ್ತವೆ. ಜೀವ ವಿಮಾ ಪಾಲಿಸಿಗಳ ಮತ್ತು ಸ್ಥಿರ ಠೇವಣಿಗಳ ಒಟ್ಟು ಮೊತ್ತ 12,00,000-00 ರೂಪಾಯಿಗಳಾಗಿರುತ್ತವೆ. ಸದರಿ ಪರಿಹಾರದ ಮೊತ್ತವನ್ನು ಪರಿಗಣಿಸಿದರೆ ಈ ನ್ಯಾಯಾಲಯದ ಮೌಲೀಕ ನ್ಯಾಯಾಧೀಕಾರ ವ್ಯಾಪ್ತಿಗೆ ಒಳಪಡದೇ ಇರುವುದು ಕಂಡುಬರುತ್ತದೆ.

10. ವಾದಿಯರ ದಾವೆಯು ಈ ನ್ಯಾಯಾಧೀಕಾರ ವ್ಯಾಪ್ತಿಗೆ ಒಳಪಡುವುದಿಲ್ಲವೇ ಎಂಬುದಾಗಿ ವಾದಿಯರ ವಾದಪತ್ರವನ್ನು ಪರಿಶೀಲಿಸಿ ನೋಡಲಾಗಿ, ಪ್ರಸ್ತುತ ದಾವೆಯಲ್ಲಿ ಇಬ್ಬರು ವಾದಿಯರಿದ್ದು, ಸದರಿಯವರು ಕೋರಿರುವ ಪರಿಹಾರದ ಮೊತ್ತವನ್ನು ಪ್ರತಿಯೊಬ್ಬ ವಾದಿಯರ ಹಕ್ಕಿಗೆ ವಿಂಗಡನೆ

ಮಾಡಿದಾಗ ಇಬ್ಬರು ಪಕ್ಷಗಾರರಿಗೆ ತಲಾ 6 ಲಕ್ಷದಂತೆ ಹಕ್ಕಿಗೆ ಅರ್ಹರಾಗಿರುತ್ತಾರೆ. ಹಾಗೇ ವಾದಿಯರು ತಮ್ಮ ವಾದಪತ್ರದಲ್ಲಿ 5ನೇ ಪ್ರತಿವಾದಿಯೂ ಸಹ ಮೃತ ಈರಮ್ಮರವರ ವಾರಸುದಾರರಾಗಿರುವುದಾಗಿ ತಿಳಿಸಿದ್ದು. ಸದರಿ ಸಂಬಂಧವನ್ನು 1 ಮತ್ತು 5ನೇ ಪ್ರತಿವಾದಿಯರು ತಮ್ಮ ಪ್ರತಿವಾದದಲ್ಲಿ ಒಪ್ಪಿಕೊಂಡಿದ್ದು. ಪ್ರಸ್ತುತ ದಾವೆಯಲ್ಲಿ ವಾದಿ ಮತ್ತು ಪ್ರತಿವಾದಿಯರು ದಾವಾ ಪರಿಹಾರದ ಮೊತ್ತದಲ್ಲಿ ಸಮಾನಾಗಿ ಅರ್ಹರಾಗಿರುವುದಾಗಿ ಸಾಕ್ಷ್ಯಾಧಾರಗಳ ಮೂಲಕ ರುಜುವಾತುಪಡಿಸಿದರೆ ದಾವಾ ಪರಿಹಾರದ ಮೊತ್ತದಲ್ಲಿ 1 ಮತ್ತು 2ನೇ ವಾದಿಯರು ಹಾಗೂ 5ನೇ ಪ್ರತಿವಾದಿ ತಲಾ 4 ಲಕ್ಷ ರೂಪಾಯಿಗಳಿಗೆ ಹಕ್ಕುದಾರರಾಗುತ್ತಾರೆ. ಸದರಿ ಅಂಶವನ್ನು ಪರಿಗಣಿಸಿದರೆ, ಪ್ರತ್ಯೇಕ ವಾದಿಯರ ಪರಿಹಾರದ ಮೊತ್ತವಾದ 4 ಲಕ್ಷ ರೂಪಾಯಿಗಳಿಗೆ ಸಂಬಂಧಿಸಿದಂತೆ ದಾವೆಯನ್ನು ನಡೆಸಲು ಈ ನ್ಯಾಯಾಲಯಕ್ಕೆ ನ್ಯಾಯಾಧೀಕಾರ ವ್ಯಾಪ್ತಿ ಬರುತ್ತದೆ.

11. ಹಾಗೇ ಪ್ರತಿವಾದಿಯರು ತಮ್ಮ ವಾದದಲ್ಲಿ ವಾದಿಯರು ಸಮರ್ಪಕ ನ್ಯಾಯಾಲಯದ ಶುಲ್ಕವನ್ನು ಪಾವತಿಸುವುದನ್ನು ತಪ್ಪಿಸುವ ಸಲುವಾಗಿ ಪರಿಹಾರದ ಮೊತ್ತವನ್ನು ವಾದಪತ್ರದಲ್ಲಿ ನಮೂದಿಸಿರುವುದಿಲ್ಲ ಎಂಬುದಾಗಿ ತಳೆದಿರುವ ವಾದವನ್ನು ಪರಿಗಣಿಸಿ, ದಾವೆಯ ದಾಖಲೆಗಳನ್ನು ಪರಿಶೀಲಿಸಿ ನೋಡಲಾಗಿ, ನ್ಯಾಯಾಲಯವು ದಿನಾಂಕ:13-06-2016 ರಂದು ನ್ಯಾಯಾಲಯದ ಶುಲ್ಕಕ್ಕೆ ಸಂಬಂಧಿಸಿದಂತೆ ಅಸಮರ್ಪಕವಾಗಿದೆಯೆಂದು ಕಂಡುಬಂದರೆ ತೀರ್ಪಿನ ಸಂದರ್ಭದಲ್ಲಿ ಪರಿಗಣಿಸುವುದಾಗಿ ತಿಳಿಸಿ ಆದೇಶ ಮಾಡಿರುವುದರಿಂದ ನ್ಯಾಯಾಲಯದ ಶುಲ್ಕಕ್ಕೆ ಸಂಬಂಧಿಸಿದಂತೆ ಈ ಹಂತದಲ್ಲಿ ಪರಿಗಣಿಸಲು ಸೂಕ್ತವಾಗಿರುವುದಿಲ್ಲ.

12. ಪ್ರತಿವಾದಿಯರ ಪ್ರತಿವಾದವನ್ನು ಮತ್ತು ದಾವೆಯ ದಾಖಲೆಗಳನ್ನು ಪರಿಗಣಿಸಿದರೆ, 1 ಮತ್ತು 2ನೇ ವಾದಿಯರು ಮಾತ್ರ ಮೃತ ಈರಮ್ಮಳ ಒಟ್ಟು ಚರಸ್ವತ್ತಾದ ರೂ.12 ಲಕ್ಷ ಹಣಕ್ಕೆ ಘೋಷಣೆ ಪಡೆದುಕೊಳ್ಳಲು ಅರ್ಹರಾಗಿರುತ್ತಾರೆಂದು ಪರಿಗಣಿಸಲು ವಾದಿಯರ ಪರ ಪೂರ್ಣ ಸಾಕ್ಷ್ಯಾಧಾರಗಳು ಕಂಡುಬರುವುದಿಲ್ಲ, ಹಾಗೇ ಮೇಲ್ನೋಟಕ್ಕೆ ವಾದಿಯರ ವಾದವನ್ನು ಪರಿಗಣಿಸಿದರೆ ಮೃತ ಈರಮ್ಮಳ ವಾರಸುದಾರರು 1 ಮತ್ತು 2ನೇ ವಾದಿಯರು ಹಾಗೂ 5ನೇ ಪ್ರತಿವಾದಿ ಮೇಲ್ನೋಟಕ್ಕೆ

ವಾರಸುದಾರರಾಗಿರುವುದು ಕಂಡುಬರುತ್ತದೆ. ಹಾಗೇ ವಾದಿಯರ ಮುಂದುವರೆದ ವಾದವನ್ನು ಪರಿಗಣಿಸಿದರೆ 1ನೇ ಪ್ರತಿವಾದಿ ಮೃತ ಈರಮ್ಮಳ ಜೀವ ವಿಮಾ ಪಾಲಿಸಿಯಲ್ಲಿ ಮತ್ತು ಸ್ಥಿರ ಠೇವಣಿಗಳಿಗೆ ಮೋಸದಿಂದ ತನ್ನ ಹೆಸರನ್ನು ನಾಮನಿರ್ದೇಶಿತ ವ್ಯಕ್ತಿಯಾಗಿ ಪೂರ್ಣ ಹಣಕ್ಕೆ ಹಕ್ಕುದಾರನಾಗಿದ್ದು ಈ ಹಂತದಲ್ಲಿ ವಾದಿಯರಿಗೆ ಯಾವುದೇ ಹಕ್ಕು ಇರುವುದಿಲ್ಲ ಎಂಬುದಾಗಿ ಪರಿಗಣಿಸಲು ಇಬ್ಬರು ಪಕ್ಷಗಾರರ ನಡುವೆ ಯಾವುದೇ ಪೂರ್ಣ ಸಾಕ್ಷ್ಯಾಧಾರಗಳು ಕಂಡುಬರುವುದಿಲ್ಲ. ವಾದಿಯರು ಮೃತ ಈರಮ್ಮಳ ಚರಸ್ವತ್ತಾದ ರೂ.12 ಲಕ್ಷ ರೂಪಾಯಿಗಳಿಗೆ ಹಕ್ಕುದಾರರಾಗಿರುವುದಾಗಿ ರುಜುವಾತುಪಡಿಸಿದರೆ 1 ಮತ್ತು 2ನೇ ಪ್ರತಿವಾದಿಯರು ತಲಾ 4 ಲಕ್ಷ ರೂಪಾಯಿಗಳಿಗೆ ಹಕ್ಕುದಾರರಾಗುತ್ತಾರೆ. ಸದರಿ ಪ್ರತಿಯೊಬ್ಬ ವಾದಿಯರ ಪರಿಹಾರದ ಮೊತ್ತವನ್ನು ಪರಿಗಣಿಸಿದರೆ ಈ ನ್ಯಾಯಾಲಯಕ್ಕೆ ದಾವೆಯನ್ನು ನಡೆಸಲು ನ್ಯಾಯಾಧೀಕಾರ ವ್ಯಾಪ್ತಿ ಹೊಂದಿರುತ್ತದೆ. ಸದರಿ ಅಂಶವನ್ನು ಪರಿಗಣಿಸಿ, ಪ್ರತಿವಾದಿಯರ ವಾದದಂತೆ ಈ ದಾವೆಯನ್ನು ನಡೆಸಲು ಈ ನ್ಯಾಯಾಲಯಕ್ಕೆ ಮೌಲೀಕ ನ್ಯಾಯಾಧೀಕಾರ ವ್ಯಾಪ್ತಿ ಇರುವುದಿಲ್ಲ ಎಂಬುದಾಗಿ ಪರಿಗಣಿಸಲು ಪ್ರತಿವಾದಿಯರ ಪರ ಸೂಕ್ತ ಸಾಕ್ಷ್ಯಾಧಾರಗಳು ಕಂಡುಬರದೇ ಇರುವುದರಿಂದ ಪ್ರತಿವಾದಿಯರ ಅರ್ಜಿಯನ್ನು ಪುರಸ್ಕರಿಸಲು ಯೋಗ್ಯವಾಗಿರುವುದಿಲ್ಲ. ಆದ್ದರಿಂದ ಅಂಶ-1ನ್ನು ನಕಾರಾತ್ಮಕವಾಗಿ ಉತ್ತರಿಸಲಾಗಿದೆ.

**13. ಅಂಶ-2:** ಮೇಲಿನ ಅಂಶ ನಂ.1 ರಲ್ಲಿ ಚರ್ಚಿಸಲಾದ ಕಾರಣಗಳಿಂದ ಕೆಳಕಂಡಂತೆ ಆದೇಶ ಮಾಡಲಾಗಿದೆ.

## ಆದೇಶ

ಪ್ರತಿವಾದಿಯರು ಸಲ್ಲಿಸಿರುವ ದಿವಾನಿ ಪ್ರಕ್ರಿಯಾ ಸಂಹಿತೆ ಕ್ರಮಾದೇಶ-7 ನಿಯಮ 11 (ಡಿ) ರಡಿಯಲ್ಲಿ ಸಲಿಸಿರುವ ಮಧ್ಯಕಾಲೀನ ಸಂಖ್ಯೆ-2 ನ್ನು ವಜಾ ಮಾಡಲಾಗಿದೆ.

ಖರ್ಚುಗಳ ಬಗ್ಗೆ ಯಾವುದೇ ಆದೇಶ ಇಲ್ಲ.

Shilpa . B
28/6/2020

(ಶ್ರೀಮತಿ ಬಿ. ಶಿಲ್ಪಾ)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಚಿಂಚೋಳಿ.

Note: order pronounced and same is intimated to both pltffs & deffts counsel through telephone message and they are not objected to pronounce the same.

For drawing of items
3/7/2020